ಎನ್ನುವಂತೆ ವಾದ ಮಂಡಿಸುತ್ತಿದ್ದ. ಅದಕ್ಕೆ ಶುದ್ಧೋದನರು, 'ಭೂಮಿಯ ಮೇಲೆ ಸಮತೋಲನ ಕಾಪಾಡಲು ಪ್ರಕೃತಿಯೇ ಸೃಷ್ಟಿಸಿರುವ ಪದ್ಧತಿ ಇದು. ಉದಾಹರಣೆಗೆ, ಕ್ರಿಮಿಕೀಟಗಳನ್ನು ಕಪ್ಪೆಗಳು ತಿನ್ನುತ್ತವೆ, ಕಪ್ಪೆಗಳನ್ನು ಹಾವು ತಿನ್ನುತ್ತದೆ, ಹಾವನ್ನು ಗರುಡ ತಿನ್ನುತ್ತದೆ... ಹೀಗೆ ಜೀವ ಸರಪಳಿ ಸದಾ ಜಾಗೃತವಾಗಿರುತ್ತದೆ. ಹೀಗೆ ಒಂದು ಪ್ರಾಣಿಯನ್ನು ಇನ್ನೊಂದು ಪ್ರಾಣಿ ಕೊಂದು ತಿನ್ನುವುದರಿಂದಲೇ ಭೂಮಿಯ ಮೇಲೆ ಎಲ್ಲ ಪ್ರಾಣಿಗಳೂ ಒಂದು ಸಮತೋಲನದಲ್ಲಿ ಇವೆ. ಇಲ್ಲವೆಂದರೆ ಅವುಗಳ ಸಂಖ್ಯೆ ಅಪಾರವಾಗಿ ಬೆಳೆದು ಏನೇನೋ ಅನರ್ಥಕ್ಕೆ ಕಾರಣವಾಗುತ್ತದೆ...' ಎಂದು ಸಮಜಾಯಿಷಿ ಹೇಳುತ್ತಿದ್ದರು.

'ಅದೇ ರೀತಿ ಮನುಷ್ಯರು ಹೆಚ್ಚಾದರೂ ಅಪಾಯವಲ್ಲವೇ? ಅವರನ್ನು ನಿಗ್ರಹಿಸುವವರು ಯಾರು?' ಎಂಬ ಸಿದ್ಧಾರ್ಥನ ದಿಢೀರ್ ಪ್ರಶ್ನೆಯಿಂದ ಅವಾಕ್ಕಾದರು. ಉತ್ತರಿಸಲು ತಡಕಾಡಿದವರು, 'ಬಹುಶಃ ಮನುಷ್ಯನನ್ನು ಮನುಷ್ಯನೇ ಕೊಲ್ಲಬೇಕಾದೀತು. ತಮ್ಮ ತಮ್ಮ ದ್ವೇಷ, ಅಸೂಯೆ, ಈರ್ಷ್ಯೆಗಳಿಗೆ ತಾವೇ ಬಲಿಯಾಗುತ್ತಾರೆ. ಅದಕ್ಕೇ ಯುದ್ಧಗಳು ನಡೆಯುವುದು ಅನ್ನಿಸುತ್ತದೆ. ಅದಕ್ಕೇ ಕೊಲ್ಲುವುದು ಕ್ಷತ್ರಿಯ ಧರ್ಮ ಎಂಬ ಮಾತು ಚಾಲ್ತಿಗೆ ಬಂದಿದೆ...' ಎಂದರು. 'ಕೊಲ್ಲುವುದೇ ಕ್ಷತ್ರಿಯನ ಧರ್ಮವೆನ್ನುವುದಾದರೆ ಅದಕ್ಕೆ ನನ್ನ ಧಿಕ್ಕಾರವಿರಲಿ. ಎಲ್ಲ ಕ್ಷತ್ರಿಯರೂ ತಮ್ಮಂತೆಯೇ ಈ ಭೂಮಿಯ ಮೇಲಿನ ಪ್ರತಿಯೊಂದು ಪ್ರಾಣಿಗೂ ಬದುಕುವ ಹಕ್ಕಿದೆ ಎಂದು ಭಾವಿಸಿದಲ್ಲಿ ಎಂಥ ಶಾಂತಿ ನೆಲೆಸಿರುತ್ತದಲ್ಲವೇ?' ಎಂದ. 'ಹಾಗಿದ್ದರೆ ತಮ್ಮ ತಮ್ಮ ರಾಷ್ಟ್ರವನ್ನು ರಕ್ಷಿಸಿಕೊಳ್ಳುವುದು ಹೇಗೆ?' ಎಂಬ ಶುದ್ಧೋದನರ ಪ್ರಶ್ನೆಗೆ, 'ಎಲ್ಲಿ ನ್ಯಾಯ ಇರುತ್ತದೋ ಅಲ್ಲಿ ಶಾಂತಿ ಇರುತ್ತದೆ, ಎಲ್ಲಿ ಅನ್ಯಾಯ ಇರುತ್ತದೋ ಅಲ್ಲಿ ಅಶಾಂತಿ ಇರುತ್ತದೆ. ಕ್ಷತ್ರಿಯರು ನ್ಯಾಯವಂತರಾದರೆ, ಪರಸ್ಪರ ಹಿಂಸೆಯನ್ನು ಬಿಟ್ಟು ಪ್ರೀತಿಸುವುದಾದರೆ ಆಕ್ರಮಣಗಳೇ ನಡೆಯುವುದಿಲ್ಲವಲ್ಲ' ಎನ್ನುತ್ತಿದ್ದ.

'ನಿನ್ನ ಮಾತು ನಿಜ ಮಗು. ಆದರೆ ಮನುಷ್ಯನದು ಸಣ್ಣತನ. ಈ ಗುಣವೇ ತನ್ನನ್ನು ತಾನೇ ನಾಶ ಮಾಡಿಕೊಳ್ಳಲು ಕಾರಣವಾಗುತ್ತದೆ. ಅವರಿಗೆ ಸರಿಯಾದ ಮಾರ್ಗದರ್ಶನ ತೋರಿ, ಬುದ್ಧಿ ಹೇಳುವವರು ಯಾರು?' ಎಂದಾಗ, ಒಂದು ಕ್ಷಣವು ತಡಮಾಡದೆ, 'ನಾನು ಹೇಳುತ್ತೇನೆ...' ಎಂದುಬಿಟ್ಟ. ಒಂದು ಕ್ಷಣ ಅವಾಕ್ಕಾಗಿ ಶುದ್ಧೋದನ ನನ್ನ ಮುಖ ನೋಡಿದರು. ನಾನು ನಿರುತ್ತರಳಾದೆ.

ಮಾತಿನ ಸರಣಿಯನ್ನು ನಿಲ್ಲಿಸಲೋಸುಗ, 'ಊಟ ಮಾಡುವಿಯಂತೆ ಬಾ ಮಗೂ' ಎಂದು ಕರೆದೊಯ್ದೆ. ಊಟ ಮಾಡುತ್ತಲೂ ಮತ್ತೊಂದು ಪ್ರಶ್ನೆ. 'ದೇವದತ್ತ ಹೇಳಿದನಲ್ಲ, ನೀನು ನನ್ನ ತಾಯಿಯಲ್ಲವೆಂದು. ಹಾಗಾದರೆ ನನ್ನ ತಾಯಿ ಯಾರು? ನೀವು ತಾಯಿಯಲ್ಲವಾದರೆ ನನ್ನ ಮೇಲೇಕೆ ಇಷ್ಟೊಂದು ಪ್ರೀತಿಯನ್ನು ತೋರಿಸುತ್ತಿದ್ದೀರಿ?' ಅಕ್ಕ ಮಾಯಾದೇವಿಯ ಸಾವಿನ ಸಂದರ್ಭ ನೆನಪಾಗಿ, ನನಗರಿವಿಲ್ಲದೇ ಕಣ್ಣಂಚಲ್ಲಿ ನೀರು ಬಂತು. ಮತ್ತೆ, 'ಹೇಳಮ್ಮ...' ಎಂಬ ಅವನ ಒತ್ತಾಯಕ್ಕೆ ನನ್ನಲ್ಲಿ ಉತ್ತರವಿರಲಿಲ್ಲ. ಗಳಗಳನೆ ಅತ್ತುಬಿಟ್ಟೆ. 'ಅವನು ನಿನ್ನನ್ನು ಹಂಗಿಸಲು ಸುಳ್ಳು ಆಪಾದನೆ ಮಾಡಿದ್ದಾನೆ. ನೋಡು, ನೀನೂ ನಂದನ ಇಬ್ಬರೂ ನನ್ನ ಮಕ್ಕಳೇ. ಬೇಕಾದರೆ ತಂದೆಯನ್ನು ಕೇಳಿ ನೋಡು' ಎಂದು ಸಮಾಧಾನಿಸಿದೆ. ಆದರೂ ಅವನೊಳಗೊಂದು ಅನುಮಾನದ ಬೀಜ ಮೊಳೆತಿರುವುದನ್ನು ಗಮನಿಸಿದೆ.

'ಎಲ್ಲರೂ ಏನೋ ಸುಳ್ಳು ಹೇಳುತ್ತಿದ್ದೀರಿ, ನನ್ನಿಂದ ಏನನ್ನೋ ಮುಚ್ಚಿಡುತ್ತಿದ್ದೀರಿ' ಎಂದುಬಿಟ್ಟ. ಆತ ಅದನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸುತ್ತಾನೆಂದು ನಾನಂದುಕೊಂಡಿರಲಿಲ್ಲ. ನಂತರ ಎಲ್ಲ ವಿಷಯಗಳನ್ನೂ ಸುಳ್ಳಿರಬಹುದೆಂದು ಅನುಮಾನಿಸಲಾರಂಭಿಸಿದ. ಸುಳ್ಳಿನ ಹಿಂದಿನ ಸತ್ಯವೇನಿರಬಹುದೆಂದು ಹುಡುಕಲಾರಂಭಿಸಿದ. ಕೆಲ ದಿನಗಳ ಉತ್ಸವವನ್ನು ಮುಗಿಸಿಕೊಂಡು ಮಕ್ಕಳೆಲ್ಲ ಉದ್ದಿಕ್ಕದ ಸಬ್ಬಮಿತ್ತರ ಶಿಕ್ಷಣ ಶಿಬಿರಕ್ಕೆ ಹೊರಟು ನಿಂತರು. ಆಗಲೇ ಹದಿನೈದು ತುಂಬಿ ಎದೆಯುದ್ದ ಬೆಳೆದು ನಿಂತಿದ್ದ ಸಿದ್ಧಾರ್ಥನನ್ನು ನೋಡಿದ ಶುದ್ಧೋದನ, 'ಇನ್ನೊಂದು ವರ್ಷದಲ್ಲಿ ಅವನ ಶಿಕ್ಷಣ ಮುಗಿಯುತ್ತದೆ. ಅಷ್ಟರಲ್ಲಿ ಸುಂದರವಾದ ಕನ್ಯೆಯೊಬ್ಬಳನ್ನು ನೋಡು' ಎಂದವರು, 'ನಿನ್ನಷ್ಟೇ ಸುಂದರಿಯಾಗಿರಬೇಕು ಮತ್ತೆ' ಎಂದು ಕುಡಿನೋಟ ಬೀರಿದರು. ಅದು ತುಸು ಲಘುವಾದ ಮಾತಾಗಿದ್ದರೂ ನಾನು ಗಂಭೀರವಾಗಿ ತೆಗೆದುಕೊಂಡೆ. ಅಸಿತ ಮಹರ್ಷಿಗಳ ಮಾತು ನೆನಪಾಯಿತು. ಎರಡು ದಾರಿಗಳಲ್ಲಿ ಅವನ ಬದುಕಿನ ಪಯಣವಿದ್ದು, ಯಾವ ದಾರಿಯಲ್ಲಿ ಹೋದರೂ ಔನ್ನತ್ಯವನ್ನು ತಲುಪುತ್ತಾನೆ ಎಂದಿದ್ದರಲ್ಲ. ಯೋಗ, ಧ್ಯಾನ ಮುಂತಾದ ತಾಪಸ್ಯದ ಕಡೆ ಹೆಚ್ಚು ಒಲವಿದ್ದ ಆತ ಅತ್ತ ವಾಲಿಬಿಟ್ಟರೇ ಎಂಬ ಭಯವೇ ನನ್ನನ್ನು ಆತನ ಮದುವೆಯ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡಿತ್ತು.

ರಾತ್ರಿ ಮಲಗುವಾಗ ಶುದ್ಧೋದನರಲ್ಲಿ ಪ್ರಸ್ತಾಪಿಸಿದೆ. ಹದಿನಾರು ತುಂಬುವುದರೊಳಗೆ ಸಂಸಾರ ಬಂಧನದಲ್ಲಿ ಸಿಲುಕಿಸಿಬಿಟ್ಟರೆ, ಅದನ್ನು ತೊರೆದು ಸನ್ಯಾಸವನ್ನು ಅರಸಿ ಹೋಗುವ ಸಾಧ್ಯತೆ ಕಡಿಮೆ ಎಂದು ಅವರಾದರೂ ಅಭಿಪ್ರಾಯಪಟ್ಟರು. ಅಲ್ಲಿಂದ ಮುಂದೆ ನನ್ನ ಕಣ್ಣಿಗೆ ಬಿದ್ದ ಹೆಣ್ಣುಗಳಲ್ಲೆಲ್ಲ ಸಿದ್ಧಾರ್ಥನಿಗೆ ಜೋಡಿಯಾಗುವ ಅರ್ಹತೆಯಿದೆಯೇ ಎಂದು ಪರೀಕ್ಷಿಸಲಾರಂಭಿಸಿದೆ. ಹನ್ನೆರಡು ಹದಿಮೂರಕ್ಕೆ ಬರುತ್ತಿದ್ದಂತೆಯೇ ಅವರವರ ಕುಟುಂಬದ ವರಸೆಯಲ್ಲೇ ಮದುವೆಗಳು ನಿರ್ಧರಿಸಲ್ಪಡುತ್ತಿದ್ದುದರಿಂದ, ಒಂದು ವರ್ಷ ಕಾಲ ಹುಡುಕಿದರೂ ಕಪಿಲವಸ್ತುವಿನಲ್ಲಿ ಯಾವ ಸೂಕ್ತ ಕನ್ಯೆಯೂ ನನ್ನ ಕಣ್ಣಿಗೆ ಬೀಳಲೇಯಿಲ್ಲ. 'ಇನ್ನೇನು ಕೆಲವೇ ದಿನಗಳಲ್ಲಿ ಶಿಕ್ಷಣವನ್ನು ಪೂರೈಸಿಕೊಂಡು ಸಿದ್ಧಾರ್ಥ ಬಂದುಬಿಡುತ್ತಾನೆ. ಆತನಿಗೆ ಮದುವೆಯೊಂದನ್ನು ಮಾಡಿಬಿಟ್ಟು, ಆಡಳಿತವನ್ನು ಆತನ ಕೈಗೆ ಕೊಟ್ಟುಬಿಡೋಣ...' ಎಂದು ಶುದ್ಧೋದನರೂ ಅವಸರಿಸಿದರು. ಇಲ್ಲವಾದರೆ, ತನ್ನ ತಮ್ಮಂದಿರು ಅಥವಾ ಅವರ ಮಕ್ಕಳು ಅಧಿಕಾರದ ಚುಕ್ಕಾಣಿ ಹಿಡಿಯಲು ಹವಣಿಸಬಹುದು ಎಂಬುದೂ ಅವರ ಇಂಗಿತವಾಗಿತ್ತು.

## ಶುದ್ಧೋದನ

ಅಸಿತ ಮಹರ್ಷಿಗಳು ಹೇಳಿದ ಭವಿಷ್ಯವಾಣಿ ಸದಾ ನನ್ನ ಕಿವಿಯಲ್ಲಿ ರಿಂಗಣಿಸುತ್ತಲೇ ಇರುತ್ತದೆ. ಆನಂತರ ಸಿಕ್ಕ ಸಿಕ್ಕ ಸಾಧ್ವಿಗಳನ್ನೆಲ್ಲ, ಜ್ಯೋತಿಷ್ಯ ಬಲ್ಲವರನ್ನೆಲ್ಲ ಕೇಳುತ್ತಲೇ ಬಂದಿದ್ದೇನೆ, ಎಲ್ಲರೂ ಆತನ ಭವಿಷ್ಯ ಅತ್ಯುಜ್ವಲವಾಗಿದೆ, ಆತನ ಕೀರ್ತಿ ಆಚಂದ್ರಾರ್ಕವಾಗಿ ಉಳಿಯಲಿದೆ ಎಂದೇ ಹೇಳುತ್ತಾರೆ. ಹಾಗೆ ಉಳಿಯಬೇಕೆಂದರೆ ಎರಡೇ ದಾರಿ. ಒಂದೋ ಸಿದ್ಧಾರ್ಥ ಕೋಸಲ, ಮಗಧಗಳಂತಹ ಬಲಿಷ್ಠ ಪ್ರಾಂತ್ಯಗಳನ್ನೆಲ್ಲ ತನ್ನ ತೆಕ್ಕೆಗೆ ತೆಗೆದುಕೊಂಡು, ಅವೆಲ್ಲದರ ಚುಕ್ಕಾಣಿ ಹಿಡಿದು ಚಕ್ರವರ್ತಿಯಾಗಬೇಕು, ಇಲ್ಲವೇ ಸುಲಭವಾದ ಸನ್ಯಾಸತ್ವವನ್ನು ಸ್ವೀಕರಿಸಿ ಚಕ್ರವರ್ತಿಗಳಿಂದಲೂ ಪಾದಪೂಜೆ ಮಾಡಿಸಿಕೊಳ್ಳುವಂಥ ಮಹಾ ತಪಸ್ವಿಯಾಗಬೇಕು. ಮೊದಲನೆಯದು ಅಷ್ಟು ಸುಲಭದ ಮಾತಲ್ಲ. ಈಗಾಗಲೇ ಬಲಾಢ್ಯ ಸಾಮ್ರಾಜ್ಯಗಳಾಗಿರುವ ಮಗಧದಂಥ ಗಣರಾಜ್ಯದ ಒಂದು ಸಣ್ಣ ಜನಸಂಘ ನಮ್ಮ ಪ್ರಾಂತ್ಯ. ಒಬ್ಬ ಸಣ್ಣ ಪ್ರಾಂತ್ಯಾಧಿಕಾರಿ ಅಖಂಡ ಭಾರತದ ಕನಸನ್ನು ಕಾಣುವುದು ಅಸಾಧ್ಯದ ಮಾತೇ ಸರಿ. ಇನ್ನು ಎರಡನೆಯದು ಸುಲಭವಾದ ಆದರೆ ಅತ್ಯಂತ ಕಠಿಣವಾದ ಮಾರ್ಗ. ಸಾಧನೆಯನ್ನು ಸಿದ್ಧಿಸಿಕೊಂಡ ಮಹರ್ಷಿಯಾದರೆ ನಾನೇ ಏನು, ನನ್ನಂಥ ಐದುನೂರಕ್ಕೂ ಹೆಚ್ಚು ಪ್ರಾಂತ್ಯಗಳ ಗಣರಾಜ್ಯಕ್ಕೆ ಸಾಮ್ರಾಟನಾಗಿರುವ ಬಿಂಬಸಾರನೂ ಕಾಲಿಗೆರಗಿಯಾನು. ಅದು ಮಹರ್ಷಿಗಳಿಗೆ ದಕ್ಕಿರುವ ಪೂಜ್ಯನೀಯ ಕಾರಣಕ್ಕಾಗಿ. ಚಕ್ರವರ್ತಿಯೇ ಏನು, ಅಂಥ ಚಕ್ರವರ್ತಿಗಳೇ ಕಾಲಿಗೆರಗುತ್ತಿದ್ದ ಅಸಿತ ಮಹರ್ಷಿಗಳೇ ಸಿದ್ಧಾರ್ಥನನ್ನು ನೋಡಿದಾಕ್ಷಣ, ಆತನ ಪುಟ್ಟ ಪಾದಗಳನ್ನು ತಮ್ಮ ತಲೆಯ ಮೇಲಿರಿಸಿಕೊಂಡು ತಲೆ ಬಾಗಿ ನಮಸ್ಕರಿಸಿದರಲ್ಲವೇ! ಅಂದರೆ ಅವರನ್ನೂ ಮೀರಿಸುವ ಮಹರ್ಷಿಯಾಗುತ್ತಾನೆಂಬುದು ಇದರ ಅರ್ಥವೇ? ಅದಕ್ಕೆ ಸಮಜಾಯಿಷಿಯನ್ನು ಕೊಟ್ಟರಲ್ಲ – ಸಿದ್ಧಾರ್ಥ ಗೌತಮನು ವಯಸ್ಸಿಗೆ ಬಂದು ಸಾಧನೆ ಮಾಡುವವರೆಗೆ ತಾನು ಬದುಕುಳಿದಿರುವುದಿಲ್ಲವೆಂದು ಈಗಲೇ ಆತನ ಆಶೀರ್ವಾದ ಪಡೆಯುತ್ತಿದ್ದೇನೆಂದಲ್ಲವೇ? ಅಸಿತರು ಯಾವ ಕಾರಣಕ್ಕೂ, ಎಂಥ ಚಕ್ರವರ್ತಿಗಳ ಚಕ್ರವರ್ತಿಯೇ ಬಂದರೂ ಅಂಥವರ ಕಾಲಿಗೆರಗುವವರಲ್ಲ. ಅಂಥವರು ಸಿದ್ಧಾರ್ಥನ ಪಾದಗಳನ್ನು ತಮ್ಮ ತಲೆಯ ಮೇಲಿರಿಸಿಕೊಂಡಿದ್ದಾರೆಂದರೆ ಅದೇ ಅರ್ಥ ತಾನೇ? ಎರಡನೇ ಸಾಧ್ಯತೆಯೇ ಬಲವಾಗಿ ನನ್ನ ಮನಸ್ಸಲ್ಲಿ ಬೇರೂರಿತ್ತು. ಅದಕ್ಕೆ ಪೂರಕವಾಗಿ ಆತನ ಜನ್ಮದಾತೆ ಮಾಯಾದೇವಿ ಕೂಡ ಅಂಥ ಸಾಧ್ವಿಯೇ ಅಲ್ಲವೇ?

ಆಕೆಯ ಗುಣವೇ ಪಡಿಯಚ್ಚಾಗಿ ಈತನಿಗೆ